# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕೆಸಿಓ-01/4976/2020-21 \1015
ಲಗತ್ತು:

ನಿಗಮ ಕಾರ್ಯಾಲಯ,
ಕ.ವಿ.ಪ್ರ.ನಿ.ನಿ., ಕಾವೇರಿ ಭವನ,
ಬೆಂಗಳೂರು-560009.
ದಿನಾಂಕ: 16 JUN 2020

## ಸುತ್ತೋಲೆ

ವಿಷಯ: ನಿವೃತ್ತರಾಗಲಿರುವ ಗುಂಪು 'ಎ' ಅಧಿಕಾರಿಗಳಿಗೆ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡುವಾಗ ಇಲಾಖಾ ವಿಚಾರಣೆ ಸಂಬಂಧಿತ ಮಾಹಿತಿ ದಾಖಲಿಸುವ ಬಗ್ಗೆ.

ಉಲ್ಲೇಖ: ಕವಿಪ್ರನಿನಿ/ಕೆಸಿಓ-01/4976/2019-20 ದಿನಾಂಕ : 05.03.2020

*****

ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ವಯೋ ನಿವೃತ್ತಿ/ಸ್ವಯಂ ನಿವೃತ್ತಿ /ಸೇವೆಯಲ್ಲಿ ಇರುವಾಗಲೇ ನಿಧನ ಹೊಂದಿದ ಗುಂಪು 'ಎ' ಅಧಿಕಾರಿಗಳಿಗೆ ಪಿಂಚಣಿ ಮತ್ತು ಇತರೆ ನಿವೃತ್ತಿ /ಮರಣ ಸವಲತ್ತುಗಳನ್ನು ನಿಗಮ ಕಾರ್ಯಾಲಯದಲ್ಲಿ ಮಂಜೂರು ಮಾಡುವ ಮತ್ತು ಅಧಿಕರಿಸುವ ಪ್ರಕ್ರಿಯೆಯಲ್ಲಿ ನಿಯಮಾನುಸಾರ ಹಲವಾರು ಅಂಶಗಳನ್ನು ಪರಿಶೀಲನೆಗೆ ಒಳಪಡಿಸಿ ಕಡತಗಳನ್ನು ಮಂಜೂರಾತಿ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಅಂತಹ ಅಂಶಗಳಲ್ಲಿ ಇಲಾಖಾ ವಿಚಾರಣೆ/ ಲೋಕಾಯುಕ್ತ/ಎ.ಸಿ.ಬಿ/ ಕ್ರಿಮಿನಲ್ ಮೊಕದ್ದಮೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಆಧರಿಸಿ ಅಧಿಕಾರಿಗಳು ತೃಪ್ತಿಕರ ಸೇವೆ ಸಲ್ಲಿಸಿರುವುದನ್ನು ನಿರ್ಧರಿಸಬೇಕಾಗಿರುತ್ತದೆ.

ನಿವೃತ್ತರಾಗಲಿರುವ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಅಥವಾ ಇತರ ಮೊಕದ್ದಮೆಗೆ ಸಂಬಂಧಿತ ಮಾಹಿತಿಯನ್ನು ಪಿಂಚಣಿ ಮಂಜೂರು ಮಾಡುವ ಪ್ರಸ್ತಾವನೆಯಲ್ಲಿ ದಾಖಲಿಸುವ ಪ್ರಕ್ರಿಯೆಯಲ್ಲಿ ಉಂಟಾಗಿರುವ ಹಲವು ಗೊಂದಲಗಳಿಂದಾಗಿ ಮತ್ತು ಇಲಾಖಾ ವಿಚಾರಣೆ ಮಾಹಿತಿಯನ್ನು ಸಂಪೂರ್ಣವಾಗಿ ಬಿಂಬಿಸದಿರುವ ಕಾರಣ ಪಿಂಚಣಿ ಮಂಜೂರಾತಿ ಮಾಡುವಲ್ಲಿ ವಿಳಂಬ ಉಂಟಾಗುತ್ತಿದೆ. ಸದರಿ ಗೊಂದಲಗಳನ್ನು ನಿವಾರಿಸಲು ಮತ್ತು ಪಿಂಚಣಿ ಮಂಜೂರಾತಿ ಪ್ರಕ್ರಿಯೆ ವಿಳಂಬವಾಗದಂತೆ ಕ್ರಮವಹಿಸಲು ಈ ಕೆಳಗಿನ ಮಾರ್ಗ ಸೂಚಿಯನ್ನು ಅಳವಡಿಸಿ ಜಾರಿಗೊಳಿಸಲಾಗುತ್ತಿದೆ.

1) ನಿವೃತ್ತರಾಗಲಿರುವ ಗುಂಪು 'ಎ' ಅಧಿಕಾರಿಗಳ ವಿವರಗಳನ್ನು ನಿಗಮವು ಒಂದು ವರ್ಷ ಮುಂಚಿತವಾಗಿ ಪ್ರಕಟಿಸುತ್ತದೆ. ಇದನ್ನು ಆಧರಿಸಿ ಪ್ರತಿ ಮಾಹೆ ನಿವೃತ್ತರಾಗಲಿರುವ ಗುಂಪು 'ಎ' ಅಧಿಕಾರಿಗಳ ವಿವರವನ್ನು ನಿಗಮದ ವಿಚಾರಣೆ ಶಾಖೆ ಸಿದ್ಧಪಡಿಸಿಕೊಳ್ಳುವುದು.

2) ಪ್ರತಿ ಮಾಹೆ ನಿವೃತ್ತರಾಗಲಿರುವ ಅಧಿಕಾರಿಗಳ ಪಟ್ಟಿಯನ್ನು ನಿಗಮದ ಇಲಾಖಾ ವಿಚಾರಣೆ ಶಾಖೆಯು **ಎರಡು** ತಿಂಗಳ ಮುಂಚಿತವಾಗಿ ನಿಗಮದ ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ) / ವ್ಯವಸ್ಥಾಪಕರು (ಸಿಬ್ಬಂದಿ-2) ಶಾಖೆಗೆ ಕಳುಹಿಸಿ ಸದರಿ ಅಧಿಕಾರಿ ಕಾರ್ಯನಿರ್ವಹಿಸಿದ ಕಂಪನಿ/ಕಚೇರಿಯ ವಿವರಗಳನ್ನು ಪಡೆಯುವುದು.

3) ಮೇಲಿನ ರೀತಿಯಲ್ಲಿ ಪಡೆದ ವಿವರ ಆಧರಿಸಿ ನಿಗಮದ ವಿಚಾರಣೆ ಶಾಖೆಯು ಸಂಬಂಧಿಸಿದ ವಿದ್ಯುತ್ ವಿತರಣ ಕಂಪನಿಗಳಿಂದ (ನಿಯೋಜನೆಯು ಸೇರಿ)/ಕವಿಪ್ರನಿನಿಯ ಪ್ರಸರಣ ವಲಯಗಳಿಂದ ಸದರಿ ಅಧಿಕಾರಿ ಕಾರ್ಯನಿರ್ವಹಿಸಿದ ಅವಧಿಗೆ ಸಂಬಂಧಿಸಿದಂತೆ ವಿಚಾರಣೆ ಸಂಬಂಧಿತ ಮಾಹಿತಿಯನ್ನು ಪಡೆಯುವುದು.

4) ವಿದ್ಯುತ್ ವಿತರಣ ಕಂಪನಿಯ ನಿಗಮ ಕಾರ್ಯಾಲಯವು ನಿವೃತ್ತರಾಗಲಿರುವ ಗುಂಪು 'ಎ' ಅಧಿಕಾರಿಗೆ ಸಂಬಂಧಿಸಿದಂತೆ ಅವರು ತಮ್ಮ ಕಂಪನಿಯಲ್ಲಿ ಕಾರ್ಯನಿರ್ವಹಿಸಿದ್ದ ಅವಧಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಸಂಬಂಧಿತ ಮಾಹಿತಿಯನ್ನು ಕವಿಪ್ರನಿನಿಯ ಇಲಾಖಾ ವಿಚಾರಣೆ ಶಾಖೆಗೆ ಶೀಘ್ರವಾಗಿ ಒದಗಿಸುವುದು.

5) ನಿಗಮದ ಇಲಾಖಾ ವಿಚಾರಣೆ ಶಾಖೆಯು ವ್ಯವಸ್ಥಾಪಕರು (ಸಿಬ್ಬಂದಿ-2) ಶಾಖೆಯಿಂದ ಸದರಿ ಅಧಿಕಾರಿಗೆ ಸಂಬಂಧಿಸಿದಂತೆ ಅವರ ಸೇವಾ ಚರಿತ್ರೆ (History of services) ಆಧರಿಸಿ ವಿಚಾರಣೆಯ ಬಗ್ಗೆ ಮಾಹಿತಿ ಪಡೆಯುವುದು.

6) ನಿಗಮದ ಇಲಾಖಾ ವಿಚಾರಣೆ ಶಾಖೆಯು ಇತರ ಕಂಪನಿಗಳಿಂದ/ಕವಿಪ್ರನಿನಿಯ ವಲಯಗಳಿಂದ ಪಡೆದ ಮಾಹಿತಿ, ವ್ಯವಸ್ಥಾಪಕರು (ಸಿಬ್ಬಂದಿ-2) ಶಾಖೆಯಿಂದ ಪಡೆದ ಮಾಹಿತಿ ಮತ್ತು ತಮ್ಮ ಶಾಖೆಯಲ್ಲಿ ಲಭ್ಯವಿರುವ ಮಾಹಿತಿ ಆಧರಿಸಿ ಈ ಕೆಳಕಂಡ ನಮೂನೆಯಲ್ಲಿ ವಿಚಾರಣೆ ಸಂಬಂಧಿತ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ಪಿಂಚಣಿ ಶಾಖೆಗೆ ಸದರಿ ಅಧಿಕಾರಿ ನಿವೃತ್ತರಾಗಲಿರುವ ದಿನಾಂಕಕ್ಕಿಂತ **ಹದಿನೈದು** ದಿನ ಮುಂಚಿತವಾಗಿ ಒದಗಿಸಲು ಕ್ರಮ ಕೈಗೊಳ್ಳುವುದು.

**ಅಧಿಕಾರಿಯ ಹೆಸರು:**

**ನಿವೃತ್ತಿ ದಿನಾಂಕದಂದು ಹೊಂದಿದ್ದ ಹುದ್ದೆ:**

**ಇಲಾಖಾ ವಿಚಾರಣೆ /ಲೋಕಾಯುಕ್ತ /ಎಸಿಬಿ/ಕ್ರಿಮಿನಲ್ ಮೊಕದ್ದಮೆ ಸಂಬಂಧಿತ ವಿವರಗಳು:**

| **ಕವಿಪ್ರನಿನಿ** | ವಿವರಗಳು<br>(ಯಾವುದೂ ಇಲ್ಲದಿದ್ದರೆ ಸ್ಪಷ್ಟವಾಗಿ ಯಾವುದೇ ವಿಚಾರಣೆ ಬಾಕಿಯಿಲ್ಲ ಎಂದು ನಮೂದಿಸುವುದು) | | |
|---|---|---|---|
| ವಿಚಾರಣೆ ಶಾಖೆ -1 | | | |
| ವಿಚಾರಣೆ ಶಾಖೆ -2 | | | |
| ವ್ಯವಸ್ಥಾಪಕರು (ಸಿ-2)<br>(ಸೇವಾ ಚರಿತ್ರೆ ಆಧರಿಸಿ) | | | |
| ನಿಯೋಜನೆ ಅವಧಿಗೆ ಸಂಬಂಧಿಸಿದಂತೆ | | | |
| **ವಿತರಣ ಸರಬರಾಜು ಕಂಪನಿಗಳು** | ಸದರಿ ಅಧಿಕಾರಿ ಕಾರ್ಯ ನಿರ್ವಹಿಸಿದ ಅವಧಿ | ಆ ಅವಧಿಯಲ್ಲಿ ಹೊಂದಿದ್ದ ಹುದ್ದೆ | ವಿಚಾರಣೆ ಸಂಬಂಧಿತ ವಿವರಗಳು (ಯಾವುದೂ ಇಲ್ಲದಿದ್ದರೆ ಸ್ಪಷ್ಟವಾಗಿ ಯಾವುದೇ ವಿಚಾರಣೆ ಬಾಕಿಯಿಲ್ಲ ಎಂದು ನಮೂದಿಸುವುದು |
| ಬೆಸ್ಕಾಂ | | | |
| ಮೆಸ್ಕಾಂ | | | |
| ಸೆಸ್ಕಾಂ | | | |
| ಹೆಸ್ಕಾಂ | | | |
| ಜೆಸ್ಕಾಂ | | | |

**ಇಲಾಖಾ ವಿಚಾರಣೆ /ಲೋಕಾಯುಕ್ತ /ಎಸಿಬಿ/ಕ್ರಿಮಿನಲ್ ಮೊಕದ್ದಮೆ ಬಾಕಿಯಿದ್ದಲ್ಲಿ ಅದರ ವಿವರಗಳು:**

| | |
|---|---|
| ಪ್ರಕರಣದ ಸಮಯದಲ್ಲಿ ಕಾರ್ಯನಿರ್ವಹಿಸಿದ ಕಂಪನಿ | |
| ಕಾರ್ಯನಿರ್ವಹಿಸಿದ ಅವಧಿ | |
| ಆ ಅವಧಿಯಲ್ಲಿ ಹೊಂದಿದ್ದ ಹುದ್ದೆ | |
| ವಿಚಾರಣೆಯ ಸ್ವರೂಪ | ಆರ್ಥಿಕ ನಷ್ಟ /ಕರ್ತವ್ಯ ಲೋಪ / ದುರ್ನಡತೆ/ ಕ್ರಿಮಿನಲ್ ಮೊಕದ್ದಮೆ ಮುಂತಾದವು. |
| ಸದರಿ ಪ್ರಕರಣದಲ್ಲಿ ಉಂಟಾಗಿರುವ ಒಟ್ಟು ಆರ್ಥಿಕ ನಷ್ಟ (ಜಂಟಿ ವಿಚಾರಣೆ ಅಥವಾ ಆ ರೀತಿಯ ಪ್ರಕರಣಗಳಲ್ಲಿ) | |
| ಸದರಿ ಅಧಿಕಾರಿಯಿಂದ ಉಂಟಾಗಿರುವ ಆರ್ಥಿಕ ನಷ್ಟ (ಆರೋಪಣ ಪಟ್ಟಿಯಲ್ಲಿ ನಮೂದಿಸಿದ್ದರೆ) | |
| ಮೇಲಿನ ಎಲ್ಲಾ ಅಂಶಗಳನ್ನು ಆಧರಿಸಿ ಸದರಿ ಅಧಿಕಾರಿಗೆ ಮಂಜೂರು ಮಾಡಲು ಪರಿಗಣಿಸಬಹುದಾದ ತಾತ್ಕಾಲಿಕ ಪಿಂಚಣಿ (ಶೇಕಡದಲ್ಲಿ) | |

7) ಮೇಲಿನ ರೀತಿಯಲ್ಲಿ ಅಧಿಕಾರಿ ನಿವೃತ್ತರಾಗುವ 15 ದಿನ ಮುಂಚಿತವಾಗಿ ಮಾಹಿತಿ ನೀಡಿದ ನಂತರ ನಿವೃತ್ತರಾಗುವ ಮುನ್ನ (ಮಧ್ಯಂತರ ಅವಧಿ) ಅವರ ವಿರುದ್ಧ ಯಾವುದೇ ವಿಚಾರಣೆ ಸಂಬಂಧಿತ ಆರೋಪಣಾ ಪಟ್ಟಿ ಜಾರಿಗೊಳಿಸಲ್ಪಟ್ಟರೆ, ಅಂತಹ ಮಾಹಿತಿಯನ್ನು ಸಂಬಂಧಪಟ್ಟ ಕಂಪನಿಯವರು ತುರ್ತಾಗಿ ಕವಿಪ್ರನಿನಿಯ ವಿಚಾರಣೆ ಶಾಖೆಗೆ ತಿಳಿಸುವುದು ಹಾಗೂ ಸದರಿ ಮಾಹಿತಿಯನ್ನು ವಿಚಾರಣೆ ಶಾಖೆಯು ಪಿಂಚಣಿ ಶಾಖೆಗೆ ಒದಗಿಸಲು ಕ್ರಮ ಕೈಗೊಳ್ಳುವುದು.

8) ಪಿಂಚಣಿ ಶಾಖೆಯು ಪಿಂಚಣಿ ಮಂಜೂರಾತಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಟಿಪ್ಪಣಿಯಲ್ಲಿ ದಾಖಲಿಸುವುದು. ಮುಂದುವರೆದು ನಿಗಮದ ಇಲಾಖಾ ವಿಚಾರಣೆ ಶಾಖೆ ಮೇಲಿನ ನಮೂನೆಯಲ್ಲಿ ಒದಗಿಸುವ ಮಾಹಿತಿಯನ್ನು ಪಿಂಚಣಿ ಮಂಜೂರಾತಿ ಪ್ರಸ್ತಾವನೆ ಟಿಪ್ಪಣಿಯಲ್ಲಿ ಯಥಾವತ್ತಾಗಿ ದಾಖಲಿಸಿ ಮಂಜೂರಾತಿ ಪ್ರಾಧಿಕಾರಕ್ಕೆ ಸಲ್ಲಿಸುವುದು.

ಮೇಲೆ ಸೂಚಿಸಿರುವ ಮಾರ್ಗ ಸೂಚಿಗಳನ್ನು ಅನುಸರಿಸಿ ನಿಗದಿತ ಕಾಲದಲ್ಲಿ ಅಗತ್ಯ ಕ್ರಮಗಳನ್ನು ಸಂಬಂಧಿಸಿದ ಅಧಿಕಾರಿಗಳು ತೆಗೆದುಕೊಂಡು ಪಿಂಚಣಿ ಮತ್ತು ನಿವೃತ್ತಿ ಸವಲತ್ತುಗಳ ಮಂಜೂರಾತಿ ಪ್ರಕ್ರಿಯೆಯನ್ನು ವಿಳಂಬವಿಲ್ಲದೆ ಸುಸೂತ್ರವಾಗಿ ನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ.

**"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರಿಂದ ಅನುಮೋದಿಸಲ್ಪಟ್ಟಿದೆ."**

15/6/20
ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ.,

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂಗಳು/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಆರ್ಥಿಕ ಸಲಹೆಗಾರರು(ಆಂತರಿಕ ಪರಿಶೋಧನೆ), ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾ.ಸಂ), ಕವಿಪ್ರನಿನಿ., ಬೆಂಗಳೂರು.
7. ಆಪ್ತ ಕಾರ್ಯದರ್ಶಿಗಳು, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ., ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ WWW.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

8. ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)/ ಉಪ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕವಿಪ್ರನಿನಿ.
9. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂಗಳು.
10. ಎಲ್ಲಾ ನಿಯಂತ್ರಣಾಧಿಕಾರಿ(ಆಂ.ಪ), ಕವಿಪ್ರನಿನಿ/ಎಸ್ಕಾಂಗಳು.
11. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂಗಳು.
12. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ(ಆಂ.ಪ), ಕವಿಪ್ರನಿನಿ/ಎಸ್ಕಾಂಗಳು.
13. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ., ಎಸ್ಕಾಂಗಳು.
14. ಕ್ರೋಢೀಕರಣ ಘಟಕ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು.
15. ಮಹಾ ಕಡತ.